ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ,
ಶ್ರೀರಂಗಪಟ್ಟಣ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ **: 8/2022**

ಚಾ.ಸಾ. **:- 12**
ಪ್ರಾ.ಸಾ. **:- 04**

| | | |
|---|---|---|
| ಹೆಸರು | : | ಹೇಮಂತ್ ಕುಮಾರ್ |
| ತಂದೆಯ ಹೆಸರು | : | ಲೇಟ್ ರಾಮಯ್ಯ |
| ವಯಸ್ಸು | : | 63 ವರ್ಷ |
| ಉದ್ಯೋಗ | : | ನಿವೃತ್ತ ಎ.ಎಸ್.ಐ., |
| ವಾಸಸ್ಥಳ | : | ಬೆಂಗಳೂರು. |

ಪ್ರಮಾಣೀಕರಿಸಲಾದ ದಿನಾಂಕಃ- **22.06.2026.**

<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :</u>

ನಾನು ದಿಃ18.07.2017 ರಿಂದ ದಿಃ 09.08.2022 ರ ಅವಧಿಯಲ್ಲಿ ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ.,ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 12.04.2021 ರಂದು ನಾನು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಚಾ.ಸಾ-1 ರವರು ನೀಡಿದ ಲಿಖಿತ ದೂರನ್ನು ಪಡೆದುಕೊಂಡು ಪ್ರಕರಣವನ್ನು ದಾಖಲು ಮಾಡಿಕೊಂಡು, ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದೂರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು.

ಪಂಚರ ಸಮಕ್ಷಮ ಮೃತರ ಶವಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಶವಪಂಚನಾಮೆಯನ್ನು ಈಗ ನೋಡುತ್ತಿದ್ದು ನಿಪಿ-11 ಎಂದು ಗುರುತಿಸಲಾಯಿತು. ಸಾಕ್ಷಿದಾರರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ. ಫೋಟೋಗಳನ್ನು ಪಂಚನಾಮೆಯ ಸಮಯದಲ್ಲಿ ತೆಗೆಯಿಸಿರುತ್ತೇನೆ. ಮೃತರ ಮರಣೋತ್ತರ ಪರೀಕ್ಷೆಯನ್ನು ಮಾಡುವಂತೆ ಮನವಿ ಸಲ್ಲಿಸಿರುತ್ತೇನೆ.

ನಂತರ ಕೃತ್ಯ ಸ್ಥಳಕ್ಕೆ ಹೋಗಿ ಪಂಚರ ಸಮಕ್ಷಮದಲ್ಲಿ ಕೃತ್ಯ ಸ್ಥಳದ ಮಹಜರನ್ನು ತಯಾರು ಮಾಡಿರುತ್ತೇನೆ. ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-12 ಎಂದು ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಕಚ್ಚಾ ನಕಾಶೆಯನ್ನು ತಯಾರು ಮಾಡಿರುತ್ತೇನೆ. ಸದರಿ ಕಚ್ಚಾ ನಕಾಶೆಯನ್ನು ಅದನ್ನು ನಿಪಿ-13 ಎಂದು ಗುರುತಿಸಲಾಯಿತು. ಅಪಘಾತ ಸ್ಥಳದ ಫೋಟೋಗಳನ್ನು ತೆಗೆಯಿಸಿರುತ್ತೇನೆ. ಪಂಚರ ಸಮಕ್ಷಮ ಅಪಘಾತಕ್ಕೆ ಸಂಬಂಧಿಸಿದಂತೆ 1 ವಾಹನವನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ವಾಹನದ 4 ಫೋಟೋಗಳನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದೆ. ಅಪಘಾತ ಸ್ಥಳದ 1 ಫೋಟೋವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-14 ಎಂದು ಗುರುತಿಸಲಾಯಿತು.

FSL ಗೆ ಮೃತರ ದೇಹದ ಮಾದರಿಗಳನ್ನು ಕಳುಹಿಸಿರುತ್ತೇನೆ.

ನಂತರ, ಪ್ರಕರಣದ ಕಡತವನ್ನು ಪ್ರಕರಣದ ದಿನಚರಿಯೊಂದಿಗೆ ಚಾಸಾ-13 ರವರು ಪಡೆದುಕೊಂಡಿರುತ್ತಾರೆ.

<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :</u>

ಗಿರೀಶ್ ರವರು ಅಪಘಾತ ಮಾಡಿರುವುದಾಗಿ ದೂರಿನಲ್ಲಿ ಇರುತ್ತದೆ ಎಂದರೆ ಸರಿ. ಅವರನ್ನು ಆರೋಪಿಯನ್ನಾಗಿ ಮಾಡಿಲ್ಲ ಎಂದರೆ ಪ್ರ.ವ.ವರದಿಯಲ್ಲಿ ಅವರೇ ಆರೋಪಿ ಎನ್ನುತ್ತಾರೆ.

ಆರೋಪಿ ತಪ್ಪಿನಿಂದ ಅಪಘಾತವಾಗದೇ ಇದ್ದರೂ ದೂರುದಾರರ ಕುಟುಂಬಕ್ಕೆ ಸಹಾಯ ಮಾಡಲು ಸುಳ್ಳು ದೂರಿನ ಆಧಾರದ ಮೇಲೆ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ ಹಾಗೂ ಪ್ರಕರಣಕ್ಕೆ ಅನುಕೂಲವಾಗುವಂತೆ ಸ್ಥಳ ಮಹಜರ್, ಕಚ್ಚಾ ನಕಾಶೆ ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ವಾಹನವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ತನಿಖಾ ಸಮಯದಲ್ಲಿ ಆರೋಪಿಯ ತಪ್ಪು ಇರುವುದಿಲ್ಲವೆಂದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ.

ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ದೂರುದಾರರ ಕುಟುಂಬಕ್ಕೆ ವಿಮೆ ಪರಿಹಾರ ಕೊಡಿಸುವ ಸಲುವಾಗಿ ಸುಳ್ಳು ದಾಖಲಾತಿ ಸೃಷ್ಟಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ **:-**</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

ಪ್ರಧಾನ ಹಿರಿಯ ಸಿಜೆ ಮತ್ತು
ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.

**ಸಾಕ್ಷಿದಾರರ ಸಹಿ.**